ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 59/2010

(ಚಾ.ಸಾ.10 ಪ್ರಾ.ಸಾ.5)
ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು
ದಿನಾಂಕಃ04.01.2020.

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮುನಿಯಪ್ಪ |
| ತಂದೆಯ/ಗಂಡನ ಹೆಸರು | ಃ | ದೊಡ್ಡವೆಂಕಟಪ್ಪ |
| ವಯಸ್ಸು | ಃ | 70 ವರ್ಷ |
| ಉದ್ಯೋಗ | ಃ | ಕೂಲಿ ಕೆಲಸ |
| ವಾಸ | ಃ | ದ್ಯಾವರಹಳ್ಳಿ |

**ಮುಖ್ಯವಿಚಾರಣೆ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ** ನಾನು ದ್ಯಾವರಹಳ್ಳಿ ಗ್ರಾಮದ ವಾಸಿ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳು ಮತ್ತು 13 ಹಾಗೂ 14ನೇ ಆರೋಪಿಗಳು ಗೊತ್ತು. 13 ಮತ್ತು 14ನೇ ಆರೋಪಿಗಳು ಗೈರು ಹಾಜರಾಗಿದ್ದು ಹಾಜರಾತಿಯಿಂದ ವಿನಾಯಿತಿ ಕೋರಿ ಅರ್ಜಿ ಸಲ್ಲಿಸಿದ್ದು ಆರೋಪಿ ಪರ ವಕೀಲರು 13 ಮತ್ತು 14ನೇ ಆರೋಪಿಗಳ ಗುರುತಿಸುವಿಕೆಯ ಬಗ್ಗೆ ತಮ್ಮ ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ಮೃತ ದೊಡ್ಡ ಚಿನ್ನಪ್ಪ, ದೇವರಾಜು, ಮೃತ ಗಾಯತ್ರಿ ಗೊತ್ತು. ಚಾಸಾ-1 ರಿಂದ 4 ಸಹ ಗೊತ್ತು. ಚಾಸಾ-8 ನನ್ನ ಮಗ.

2. ಒಂಬತ್ತು ವರ್ಷದ ಹಿಂದೆ ಚಾಸಾ-4 ಮನೆ ಕಟ್ಟುವ ಬಗ್ಗೆ ಇಟ್ಟಿಗೆಯನ್ನು 1ನೇ ಆರೋಪಿಯಿಂದ ಖರೀದಿ ಮಾಡಿದ್ದರು. ಬೆಳಗ್ಗೆ 07.30ಕ್ಕೆ 1ನೇ ಆರೋಪಿ ಇಟ್ಟಿಗೆ ಹಣ ಕೇಳಲು ಚಾಸಾ-4ರವರ ಮನೆಯ ಬಳಿಗೆ ಬಂದಿದ್ದರು ಆಗ ನಾನು ಇರಲಿಲ್ಲ. ಚಾಸಾ-4 ಇವತ್ತು ಹಬ್ಬ

ಇದೆ ಹಣ ಇಲ್ಲ ನಂತರ ಕೊಡುತ್ತೇನೆ ಎಂದು 1ನೇ ಆರೋಪಿಗೆ ಹೇಳಿದ್ದರು. ಸೋಮವಾರ ಹಣ ಕೊಡುತ್ತೇನೆ ಎಂದು ಚಾಸಾ-4 ಹೇಳಿದ್ದರೂ 1ನೇ ಆರೋಪಿ ಈಗಲೇ ಹಣ ಬೇಕು ಎಂದು ಕೇಳಿದ್ದರು. ಚಾಸಾ-4 ಹಣ ಇಲ್ಲ ಚೆಕ್ ಕೊಡುತ್ತೇನೆ ಎಂದು ಹೇಳಿದ್ದರು. 1ನೇ ಆರೋಪಿ ಅದಕ್ಕೆ ಒಪ್ಪಿರಲಿಲ್ಲ. 1ನೇ ಆರೋಪಿ ತನ್ನ ಗಾಡಿಯನ್ನು ಸ್ಥಳದಲ್ಲಿ ಬಿಟ್ಟು ಹೊರಟು ಹೋಗಿದ್ದರು. 1ನೇ ಆರೋಪಿ 1 ಘಂಟೆಯ ಒಳಗಡೆ ಏನು ಮಾಡುತ್ತೇನೆ ಎಂದು ಹೇಳಿ ಹೊರಟು ಹೋಗಿದ್ದರು.

3. 07.00ರಿಂದ 07.30ರ ಸಮಯಕ್ಕೆ 1ನೇ ಆರೋಪಿ ಮತ್ತು ಇತರ ಆರೋಪಿಗಳು ಎರಡು ಕಾರಿನಲ್ಲಿ ನಾಲ್ಕು ಬೈಕಿನಲ್ಲಿ ಬಂದಿದ್ದರು ಆಗ ನಾನು ನಾರಾಯಣಸ್ವಾಮಿರವರ ಮನೆಯ ಬಳಿ ಬರುತ್ತಿದ್ದೆ. 1ನೇ ಆರೋಪಿ ಚಾಸಾ-4 ನಾರಾಯಣಸ್ವಾಮಿರವರನ್ನು ಸಾಯಿಸಿಬಿಡೋಣ ಎಂದು ಹೇಳುತ್ತಿದ್ದರು. ಚಾಸಾ-4ರವರನ್ನು ಆರೋಪಿಗಳು ಸಾಯಿಸಿಬಿಡುತ್ತಾರೆ ಎಂದು ಅವರನ್ನು ಮನೆಯ ಒಳಗೆ ಹಾಕಿ ಚಿಲಕ ಹಾಕಿದ್ದೆವು. ಗಾಯಿತ್ರಿಮ್ಮರವರು ಅಡ್ಡ ಬಂದಾಗ ಆಕೆಗೆ ಚಾಕುವಿನಿಂದ ಹೊಟ್ಟೆಗೆ ತಿವಿದಿದ್ದರು ಯಾರು ತಿವಿದಿದ್ದರೋ ಗೊತ್ತಿಲ್ಲ. ಗಾಯಿತ್ರಮ್ಮ ಮೃತರಾಗಿದ್ದರು. ದೊಡ್ಡಚಿನ್ನಪ್ಪರವರಿಗೆ ಚಾಕುವಿನಿಂದ ತಿವಿದಿದ್ದರು. ದೇವರಾಜುವಿಗೆ ಚಾಕುವಿನಿಂದ ತಿವಿದಿದ್ದರು. ಯಾರೋ ತಿವಿದಿದ್ದರು. ಮುನಿಕೃಷ್ಣ ಚಾಸಾ-1 ಅಡ್ಡ ಬಂದಿದ್ದರು ಆತನಿಗೂ ಚಾಕುವಿನಿಂದ ತಿವಿದಿದ್ದರು. ಚಾಸಾ-2 ಮುನಿರಾಜಪ್ಪ ಸಹ ಬಂದಿದ್ದರು ಆತನಿಗೂ ಸಹ ಚಾಕುವಿನಿಂದ ತಿವಿದಿದ್ದರು. ನಂತರ ಚಾಸಾ-3 ಮಂಜುನಾಥನಿಗೂ ಸಹ ತಿವಿದಿದ್ದರು. ಚಾಕುವಿನಿಂದ ತಿವಿದಿದ್ದ ವ್ಯಕ್ತಿಗಳು ಸ್ಥಳದಿಂದ ಓಡಿ ಹೋಗಿದ್ದರು. 19 ಜನ ವ್ಯಕ್ತಿಗಳು ಸ್ಥಳಕ್ಕೆ ಬಂದಿದ್ದರು. ನಾರಾಯಣಸ್ವಾಮಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು.

4. ಬೆಳಗ್ಗೆ 7 ಗಂಟಗೆ ಪೋಲಿಸರು ಸ್ಥಳಕ್ಕೆ ಬಂದಿದ್ದರು. ಗಲಾಟೆ ಎಲ್ಲಿ ನಡೆದಿದ್ದು ಎಂದು ಕೇಳಿದ್ದರು ನಾನು ಗಲಾಟೆ ನಡೆದ ಸ್ಥಳ ಚಾಸಾ-4ರವರ ಮನೆಯ ಬಳಿ ತೋರಿಸಿದ್ದೆ. ಸ್ಥಳದಲ್ಲಿ ರಕ್ತಮಿಶ್ರಿತ ಮಣ್ಣನ್ನು ಎರಡು ಬಾಟಲ್‌ನಲ್ಲಿ ತೆಗೆದುಕೊಂಡಿದ್ದರು ಮಾದರಿ ಮಣ್ಣನ್ನು

ಎರಡು ಬಾಟಲ್‌ನಲ್ಲಿ ಸ್ಥಳದಿಂದ ಪೋಲಿಸರು ತೆಗೆದುಕೊಂಡಿದ್ದರು. ಪೋಲಿಸರು ನನಗೆ ದಾಖಲೆಗೆ ಸಹಿ ಮಾಡಬೇಕು ಎಂದು ಹೇಳಿದ್ದರು. ನಾನು ಒಪ್ಪಿದ್ದೆ. ಸಾಕ್ಷಿ ಮಹಜರ್ ಮತ್ತು ತಮ್ಮ ಸಹಿ ನೋಡಿ ಗುರುತಿಸಿದ್ದು ಮಹಜರ್ ಅನ್ನು ನಿಪಿ-5 ಎಂದು ಸಹಿಯನ್ನು ನಿಪಿ-5(ಎ) ಎಂದು ಗುರುತು ಮಾಡಲಾಯಿತು. ಪೋಲಿಸರು ಸ್ಥಳದಲ್ಲಿ ಜಪ್ತಿ ಮಾಡಿಕೊಂಡಿದ್ದ ವಸ್ತುಗಳನ್ನು ಮತ್ತು ಕೃತ್ಯಕ್ಕೆ ಉಪಯೋಗಿಸಿದ್ದ ವಸ್ತುಗಳನ್ನು ನೋಡಿದರೆ ಈಗ ನನಗೆ ಗುರುತಿಸಲು ಸಾಧ್ಯವಿಲ್ಲ. ನಿಪಿ-5ರ ವಿಷಯಗಳನ್ನು ಪೋಲಿಸರು ನನಗೆ ಓದಿ ಹೇಳಿದ್ದರು.

(ಈ ಹಂತದಲ್ಲಿ ಮಾನ್ಯ ವಿಶೇಷ ಸರಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು)

5. **<u>ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ</u>**

ಶಿವರಾತ್ರಿ ಹಬ್ಬದ ದಿನ ರಾತ್ರಿ 9.00ರಿಂದ 9.30ರ ಸಮಯದಲ್ಲಿ ಗಲಾಟೆ ನಡೆದಿತ್ತು ಎಂದರೆ ಸರಿ. ಆರೋಪಿಗಳೆಲ್ಲರೂ ಗುಂಪುಗಟ್ಟಿ ದೊಣ್ಣೆ ಚಾಕು ಚೂರಿಗಳನ್ನು ಹಿಡಿದು ತಂದಿದ್ದರು ಎಂದರೆ ಸರಿ. ನಾನು ಮನೆಗೆ ಊಟಕ್ಕೆ ಹೋಗುತ್ತಿದ್ದಾಗ ಸದರಿ ಗಲಾಟೆ ನಡೆದಿತ್ತು ಎಂದರೆ ಸರಿ. ಗುಂಪಿನಲ್ಲಿದ್ದ ಒಬ್ಬ ವ್ಯಕ್ತಿ ಚಾಸಾ-4ರವರಿಗೆ ವಡ್ಡ ನನ್ನ ಮಗನೇ ಎಂದು ಹೇಳಿ ಕೈಗಳಿಂದ ಕಪಾಳಕ್ಕೆ ಹೊಡೆದಿದ್ದ ಎಂದರೆ ಸರಿ. ಆಗ ಮೃತ ದೊಡ್ಡ ಚಿನ್ನಪ್ಪ ಮತ್ತು ಮೃತ ಗಾಯಿತ್ರಮ್ಮ ಚಾಸಾ-4ರವರನ್ನು ಮನೆಯ ಒಳಗೆ ಹಾಕಿ ಬಾಗಿಲು ಹಾಕಿದ್ದರು ಎಂದರೆ ಸರಿ. 1ನೇ ಆರೋಪಿ ಚಾಸಾ-4ರವರಿಗೆ ಈ ವಡ್ಡ ನನ್ನ ಮಗಗನ್ನು ಬಿಡಬಾರದು ಎಂದು ಚಾಸಾ-4ರವರ ಮನೆಯು ಕಡೆಗೆ ಹೋಗುತ್ತಿದ್ದಾಗ ಮೃತ ಗಾಯಿತ್ರಮ್ಮ 1ನೇ ಆರೋಪಿಯನ್ನು ತಡೆದಿದ್ದರು ಎಂದರೆ ಸರಿ. 1ನೇ ಆರೋಪಿ ಮೃತ ಗಾಯಿತ್ರಮ್ಮರವರ ಹೊಟ್ಟೆಗೆ ಚಾಕುವಿನಿಂದ ತಿವಿದಿದ್ದರು ಎಂದರೆ ಸರಿ. ಕುಮಾರ ಮತ್ತು ಗುಂಪಿನಲ್ಲಿದ್ದ ಇನ್ನೊಬ್ಬ ವ್ಯಕ್ತಿ ಮೃತ ಗಾಯಿತ್ರಮ್ಮರವರಿಗೆ ದೊಣ್ಣೆಯಿಂದ ಹೊಡೆದಿದ್ದರು ಎಂದರೆ ಸರಿ. ದೊಡ್ಡ ಚಿನ್ನಪ್ಪ ಹೊಡೆಯಬೇಡಿ ಎಂದು ಕೈಗಳಿಂದ ತಡೆದಿದ್ದರು ಆಗ ಚಾಕು ಕೆಳಗೆ ಬಿದ್ದಿತ್ತು, ಅದೇ ಚಾಕುವಿನಿಂದ ಗುಂಪಿನಲ್ಲಿದ್ದ ಒಬ್ಬ ವ್ಯಕ್ತಿ ದೊಡ್ಡ

ಚಿನ್ನಪ್ಪರವರ ಹೊಟ್ಟೆಗೆ ಎಳೆದಿದ್ದ ಎಂದರೆ ಸರಿ. ದೇವರಾಜುವಿಗೆ ಗುಂಪಿನಲ್ಲಿದ್ದ ಅದೇ ವ್ಯಕ್ತಿ ಚಾಕುವಿನಿಂದ ಹೊಟ್ಟೆಗೆ ತಿವಿದಿದ್ದ ಎಂದರೆ ಸರಿ ಸಾಕ್ಷಿ ಮುಂದುವರಿದು ಕಾಲುಗಳಿಂದ ದೇವರಾಜುವಿನ ಮರ್ಮಾಂಗಕ್ಕೆ ಒದ್ದಿದ್ದ ಎಂದು ನುಡಿದಿರುತ್ತಾರೆ. ಚಾಸಾ-1 ಮೃತರ ಸಹಾಯಕ್ಕೆ ಬಂದಿದ್ದು ಆತನ ಹೊಟ್ಟೆಗೂ ಮತ್ತು ಬಲಗಾಲಿಗೂ ಸಹ ತಿವಿದಿದ್ದ ಎಂದರೆ ಸರಿ. ಜಗಳ ಬಿಡಿಸಲು ಬಂದ ಚಾಸಾ-2 ಮುನಿರಾಜಪ್ಪರವರಿಗೆ 5ನೇ ಆರೋಪಿ ಮುನಿರಾಜ ಕೈನಲ್ಲಿದ್ದ ಚಾಕುವಿನಿಂದ ಎದೆಗೆ ತಿವಿದಿದ್ದ ಎಂದರೆ ಗೊತ್ತಿಲ್ಲ. ಚಾಸಾ-2ರವರ ಎಡಗೈಗೆ ಏಟಾಗಿತ್ತು ಎಂದರೆ ಸರಿ. ಅಶ್ವಥಕಟ್ಟೆ ಕಡೆಯಿಂದ ಜನ ಬರುವುದು ನೋಡಿ ಆರೋಪಿಗಳು ಓಡಿ ಹೋಗಿದ್ದರು ಎಂದರೆ ಸರಿ. ಚಾಸಾ-3 ಮಂಜುನಾಥ ಬೈಕಿನಲ್ಲಿ ಹೋಗುತ್ತಿದ್ದವರ ಬೈಕನ್ನು ತಳ್ಳಿದಾಗ ಬೈಕ್ ಬಿದ್ದು ಹೋಗಿತ್ತು ಎಂದರೆ ಸರಿ. ಚಾಸಾ-3 ಮಂಜುನಾಥ ಕಲ್ಲಿನ್ನು ಬೈಕ್‌ನಿಂದ ಕೆಳಗೆ ಬಿದ್ದವರಿಗೆ ಎಸೆದಿದ್ದರು ಎಂದರೆ ನೆನಪಿಲ್ಲ. 4ನೇ ಆರೋಪಿ ಗೋವಿಂದ, ಚಾಸಾ-3 ಮಂಜುನಾಥರವರಿಗೆ ಚಾಕುವಿನಿಂದ ಪಕ್ಕೆಗೆ ತಿವಿದಿದ್ದ ಎಂದರೆ ಗೊತ್ತಿಲ್ಲ. ದೊಡ್ಡಚಿನ್ನಪ್ಪರವರಿಗೆ ಚಾಕುವಿನಿಂದ ತಿವಿದ ಹುಡುಗನೇ ಮಂಜುನಾಥ ಚಾಸಾ-3ರವರ ತಲೆಗೆ ಚಾಕುವಿನಿಂದ ಚುಚ್ಚಿದ್ದರು ಎಂದರೆ ಸರಿ. ಚಾಸಾ-3 ಮಂಜುನಾಥ ಕುಸಿದು ಬಿದ್ದ ಆಗ ಎಲ್ಲಾ ವ್ಯಕ್ತಿಗಳು ಓಡಿ ಹೋಗಿದ್ದರು ಎಂದರೆ ಸರಿ. ಆಸ್ಪತ್ರೆಗೆ ಕರೆದುಕೊಂಡು ಹೋದ ಗಾಯಾಳುವಿನಲ್ಲಿ ಮೂವರು ಮೃತರಾಗಿದ್ದು ಮೂವರಿಗೆ ತೀರ್ವ ಸ್ವರೂಪದ ಗಾಯಗಳಾಗಿತ್ತು ಎಂದರೆ ಸರಿ. ಈ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿದ್ದೆ ಎಂದರೆ ಸರಿ. ಒಂಬತ್ತು ಒಂಬತ್ತುವರೆ ವರ್ಷಗಳ ಹಿಂದೆ ಗಲಾಟೆ ನಡೆದಿದ್ದರಿಂದ ಗಲಾಟೆಯ ಎಲ್ಲಾ ವಿಚಾರಗಳು ನನ್ನ ಮುಖ್ಯ ವಿಚಾರಣೆಯ ವೇಳೆ ನನಗೆ ನೆನಪಾಗಲಿಲ್ಲ ಎಂದರೆ ಸರಿ. ಗಲಾಟೆ ನಡೆದ ದಿನ ಬೆಳಗ್ಗೆ 07.30ರ ಸಮಯದಲ್ಲಿ ಆದ ಗಲಾಟೆ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ.

**6. ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ** ಈ ಹಂತದಲ್ಲಿ 1, 5, 6, 4, 17, 6, 11, 13, 14, 15, 16, 18, 19, 3, 7ನೇ ಆರೋಪಿಗಳ ಪರ ವಕೀಲರು

ಕಲಂ 231(2) ಕ್ರಿಪ್ರಸಂಹಿತೆ ಅನ್ವಯ ಅರ್ಜಿ ಸಲ್ಲಿಸಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಪ್ರಶೀಲಾ ಕುಮಾರಿ ಜಿ ಎಸ್)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ , ಬೆಂಗಳೂರು.